# ಯುವಕರ ಹ್ಯಾಟ್ ಟ್ರೆಂಡ್ ಬ

**ಪುರುಷರ ಸ್ಟೈಲ್ ಸ್ಟೇಟ್‌ಮೆಂಟ್ ಆಗಿದ್ದ 'ಟೋಪಿ'ಗಳು ಮತ್ತೆ ಚಾಲ್ತಿಯಲ್ಲಿವೆ. ಬಕೆಟ್, ಬೀನಿ, ಫೆಡೊರಾ, ವೈಸರ್, ಬೇಸ್‌ಬಾಲ್... ನಾನಾ ನಮೂನೆಯ ಟೊಪ್ಪಿಗೆಗಳು ಆಧುನಿಕ ಯುವಕರ ಹಾಟ್ ಫೇವರೆಟ್ ಆಗಿವೆ.**

■ ಎಸ್ಸೆನ್





ಯಾವುದೇ ಭಾಷೆಯ ಹಳೆಯ ಸಿನಿಮಾಗಳನ್ನೊಮ್ಮೆ ಗಮನಿಸಿ ನೋಡಿ. ಹೀರೊ ಆಗಲಿ, ವಿಲನ್ ಆಗಿರಲಿ ಅವರ ದಿರಿಸಿಗೆ ತಕ್ಕಂತೆ ತಲೆ ಮೇಲೊಂದು ಟೋಪಿ ಇರುವುದು ಸಾಮಾನ್ಯವಾಗಿತ್ತು. ರೆಟ್ರೊ ಸಿನಿಮಾಗಳಲ್ಲಿ, ಅದರಲ್ಲೂ ಆ್ಯಕ್ಷನ್ ಸಿನಿಮಾಗಳಲ್ಲಿ ಗೂಢಚಾರಿಕೆ ಮಾಡುವ ವ್ಯಕ್ತಿ, ಅಗಲ ಟೋಪಿಯೊಂದಿಗೆ ಮೊಣಕಾಲುದ್ದದ ಕೋಟ್ ಧರಿಸಿ ಸಿಗರೇಟು ಹೊಗೆ ಬಿಡುವ ದೃಶ್ಯವಂತೂ ಇದ್ದೇ ಇರುತ್ತಿತ್ತು.

ಅಷ್ಟೇ ಏಕೆ, ವಿಶ್ವ ಪ್ರಸಿದ್ಧ ಚಾರ್ಲಿ ಚಾಪ್ಲಿನ್ ತನ್ನ ಟೋಪಿ ಬಳಸಿಯೇ ಎಷ್ಟು ಜನರ ಮುಖದಲ್ಲಿ ನಗೆಯುಕ್ಕಿಸಿಲ್ಲ ಹೇಳಿ? ಕೋಟ್ಯಂತರ ಜನರ ಹೃದಯ ಕದ್ದ ಮೈಕಲ್ ಜಾಕ್ಸನ್ ತನ್ನ ಟೋಪಿಯನ್ನೇ ಪ್ರಾಪರ್ಟಿ ಆಗಿಸಿಕೊಂಡು ಮಾಡುತ್ತಿದ್ದ ಅದ್ಭುತ ನೃತ್ಯ ನೆನಪಿನಿಂದ ಸರಿಯುವುದಿದೆಯೇ?

ಸಿನಿಮಾಗಳು, ಸೆಲೆಬ್ರಿಟಿಗಳು ಮಾತ್ರವಲ್ಲ, ಸಾಮಾನ್ಯ ಜನರಲ್ಲೂ ಪ್ರಸಿದ್ಧವಾಗಿದ್ದ ತಲೆಗವಸು ಈ ಟೋಪಿ. ನಾಗರಿಕತೆಯೊಂದು ಆರಂಭವಾಗಿ ಮನುಷ್ಯ ಉಡುಪು ತೊಡಲು ಶುರು ಮಾಡಿದಾಗಿನಿಂದಲೂ ಒಂದಲ್ಲ ಒಂದು ರೀತಿ ಈ ತಲೆಗವಸು ಅವನೊಂದಿಗೇ ಬಂದಿದೆ. ಇದಕ್ಕೆ ಸಾಕ್ಷಿಯೆಂಬಂತೆ, ಕ್ರಿ.ಪೂ. 3200ರಲ್ಲಿ